**4018/5062/6026/7026**

**III Semester 3 Year LL.B./ V Semester 5 Year B.A. LL.B. (Maj.-Min. System)/ B.B.A. LL.B./B.Com. LL.B. Examination, October/November 2021**

# ADMINISTRATIVE LAW

Duration : 3 Hours Max. Marks : 80

**Instructions :** 1. **Answer any five questions from group (a) each question carries 10 marks.**

2. **Answer any five questions from group (b) each question carries 6 marks.**

3. **Answers should be written either in English or Kannada completely.**

Q. No. 1. (a) Define administrative law. Explain its nature and scope. Marks : 10

ಆಡಳಿತಾತ್ಮಕ ಕಾನೂನನ್ನು ವ್ಯಾಖ್ಯಾನಿಸಿ. ಆಡಳಿತಾತ್ಮಕ ಕಾನೂನಿನ ಸ್ವರೂಪ ಮತ್ತು ವ್ಯಾಪ್ತಿಯನ್ನು ವಿವರಿಸಿ.

Q. No. 1. (b) Write a short note on rule of law. Marks : 6

ಕಾನೂನಿನ ಅಧಿಪತ್ಯದ ಕುರಿತು ಲಘು ಟಿಪ್ಪಣಿ ಬರೆಯಿರಿ.

Q. No. 2. (a) Discuss the position of the doctrine of separation of powers in India with reference to the collegium system in appointing judges to the High Courts and the Supreme Court. Marks : 10

ಕೊಲಿಜಿಯಂ ಶಿಫಾರಸ್ಸು ಮೇರೆಗೆ ಉಚ್ಚ ಹಾಗೂ ಸರ್ವೋಚ್ಚ ನ್ಯಾಯಾಲಯಗಳಿಗೆ ನ್ಯಾಯಾಧೀಶರನ್ನು ನೇಮಿಸುವ ಹಿನ್ನೆಲೆಯಲ್ಲಿ ಭಾರತದಲ್ಲಿ 'ಅಧಿಕಾರ ಪ್ರತ್ಯೇಕೀಕರಣ' ಸಿದ್ಧಾಂತವನ್ನು ಚರ್ಚಿಸಿ.

Q. No. 2. (b) Write a note on Droit Administratif (French Legal System) Marks : 6

ಡ್ರಾಟ್ ಎಡ್ಮಿನಿಸ್ಟ್ರಾಟಿಫ್ (France ನ ನ್ಯಾಯಿಕ ಪದ್ಧತಿ) ಕುರಿತು ಟಿಪ್ಪಣಿ ಬರೆಯಿರಿ.

Q. No. 3. (a) Explain how the parliament of India exercises control over delegated legislation. Marks : 10

ಭಾರತದಲ್ಲಿ ಸಂಸತ್ತು ಯಾವ ರೀತಿಯಲ್ಲಿ ಪ್ರತ್ಯಾಯೋಜಿತ ಶಾಸನವನ್ನು ನಿಯಂತ್ರಿಸುತ್ತದೆಂದು ವಿವರಿಸಿ.

Q. No. 3. (b) The Central Government delegated power to the State Government to take loans from the Asian Development Bank for developing infrastructure. The State Government delegated this power to the city and municipal corporations of the State. The city corporation borrowed money from the ADB and imposed the self assessment scheme of collecting house tax within the corporation limits. A group of citizen challenged the delegation of power from the state Government to the city corporation. Decide. Marks : 6

ಕೇಂದ್ರ ಸರಕಾರವು ತನಗೆ ಇರುವ ಏಶಿಯಾ ಅಭಿವೃದ್ಧಿ ಬ್ಯಾಂಕಿನಿಂದ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ ಸಾಲ ಪಡೆದುಕೊಳ್ಳುವ ಅಧಿಕಾರವನ್ನು ರಾಜ್ಯ ಸರಕಾರಕ್ಕೆ ವರ್ಗಾಯಿಸಿತು. ರಾಜ್ಯ ಸರಕಾರವು ಈ ಅಧಿಕಾರವನ್ನು ನಗರಪಾಲಿಕೆ ಹಾಗೂ ಮಹಾನಗರ ಪಾಲಿಕೆಗಳಿಗೆ ವರ್ಗಾಯಿಸಿತು. ನಗರ ಪಾಲಿಕೆಯೊಂದು ಈ ಸಾಲವನ್ನು ಪಡೆದು ನಾಗರಿಕರಿಂದ ಸ್ವಯಂ ಮೌಲ್ಯಮಾಪನ ಯೋಜನೆಯಡಿಯಲ್ಲಿ ತೆರಿಗೆ ವಸೂಲಿ ಮಾಡಿತು. ಕೇಂದ್ರ ಸರಕಾರ ಪ್ರತ್ಯಾಯೋಜಿಸಿದ ಅಧಿಕಾರವನ್ನು ರಾಜ್ಯ ಸರಕಾರ ನಗರ ಮತ್ತು ಮಹಾನಗರ ಪಾಲಿಕೆಗಳಿಗೆ ಉಪ-ಪ್ರತ್ಯಾಯೋಜನೆ ಮಾಡಿದ್ದನ್ನು ಕೆಲವು ನಾಗರಿಕರು ಪ್ರಶ್ನಿಸಿದ್ದಾರೆ. ನಿರ್ಧರಿಸಿ.

Q. No. 4. (a) Discuss with the help of decided cases judicial control over delegated legislation. Marks : 10

ನಿರ್ಧರಿತ ಪ್ರಕರಣಗಳೊಂದಿಗೆ ಪ್ರತ್ಯಾಯೋಜಿತ ಶಾಸನವನ್ನು ನ್ಯಾಯಾಧೀಕರಣ ಹೇಗೆ ನಿಯಂತ್ರಿಸುತ್ತದೆಂದು ಚರ್ಚಿಸಿ.

Q. No. 4. (b) The Central Government delegated power to the department of Atomic energy to decide all issues in connection with setting up of a nuclear plant. When this delegation was challenged, the Central Govt. contended that as it was a highly technical issue, delegation was justified. Decide. Marks : 6

ಕೇಂದ್ರ ಸರಕಾರವು ಒಂದು ಪರಮಾಣು ವಿದ್ಯುತ್ ಸ್ಥಾವರದ ಸ್ಥಾಪನೆಗೆ ಸೇರಿದ ಎಲ್ಲಾ ವಿಷಯಗಳನ್ನು ನಿರ್ಧರಿಸುವ ಅಧಿಕಾರವನ್ನು ಅಣುಶಕ್ತಿ ಇಲಾಖೆಗೆ ಪ್ರತ್ಯಾಯೋಜಿಸಿತು. ಈ ಪ್ರತ್ಯಾಯೋಜನೆಯನ್ನು ನಾಗರಿಕರು ಪ್ರಶ್ನಿಸಿದಾಗ ಕೇಂದ್ರ ಸರಕಾರವು ಈ ವಿಷಯ ಬಹಳ ತಾಂತ್ರಿಕತೆಯಿಂದ ಕೂಡಿದ್ದೆಂದು, ಪ್ರತ್ಯಾಯೋಜನೆ ಸರಿ ಎಂದು ವಾದಿಸಿತು. ನಿರ್ಧರಿಸಿ.

Q. No. 5. (a) Define 'quasi-judicial' function. On what grounds are functions classified as 'quasi-judicial' ? Marks : 10

"ಅರೆ ನ್ಯಾಯಿಕ ಸ್ವರೂಪದ" ಕಾರ್ಯವನ್ನು ವ್ಯಾಖ್ಯಾನಿಸಿ. ಯಾವ ಆಧಾರಗಳ ಮೇಲೆ ಕಾರ್ಯಗಳನ್ನು ಅರೆ ನ್ಯಾಯಿಕ ಸ್ವರೂಪದ ಕಾರ್ಯಗಳೆಂದು ಹೇಳಲಾಗುತ್ತದೆ ?

Q. No. 5. (b) Write a note on : Marks : 6
ಟಿಪ್ಪಣಿ ಬರೆಯಿರಿ :
Personal bias.
ವೈಯಕ್ತಿಕ ಪಕ್ಷಪಾತ.

Q. No. 6. (a) Discuss the various exceptions to the principles of natural justice. Refer to decided cases. Marks : 10
ನೈಸರ್ಗಿಕ ನ್ಯಾಯ ತತ್ವಗಳಿಗಿರುವ ವಿವಿಧ ಅಪವಾದಗಳನ್ನು ಚರ್ಚಿಸಿ. ನಿರ್ಧರಿತ ಪ್ರಕರಣಗಳನ್ನು ಉಲ್ಲೇಖಿಸಿ.

Q. No. 6. (b) A writ of mandamus is dismissed by the high court without affording reasons. The petitioner challenges the dismissed on the grounds that the principles of natural justice were violated. Which principle is violated ? Discuss. Marks : 6

ಒಂದು ಮ್ಯಾಂಡಮಸ್ ರಿಟ್ಟನ್ನು ಉಚ್ಚ ನ್ಯಾಯಾಲಯ ಕಾರಣಗಳನ್ನು ನೀಡದೆ ವಜಾ ಮಾಡುತ್ತದೆ. ನೈಸರ್ಗಿಕ ನ್ಯಾಯದ ತತ್ವಗಳನ್ನು ಉಲ್ಲಂಘಿಸಲಾಗಿದೆ ಎಂದು ಅರ್ಜಿದಾರನು ವಾದಿಸುತ್ತಾನೆ. ಯಾವ ನೈಸರ್ಗಿಕ ನ್ಯಾಯದ ತತ್ವವನ್ನು ಉಲ್ಲಂಘಿಸಲಾಗಿದೆ ? ಚರ್ಚಿಸಿ.

Q. No. 7. (a) Explain the salient features of the writs of certiorari and Quo warranto. Refer to decided cases. Marks : 10
ಸರ್‌ಷಿಯೋರರಿ ಹಾಗೂ ಕೋವಾರೆಂಟೊ ಪರಮಾದೇಶಗಳ ಮುಖ್ಯಾಂಶಗಳನ್ನು ವಿವರಿಸಿ. ನಿರ್ಧರಿತ ಪ್ರಕರಣಗಳನ್ನು ಉಲ್ಲೇಖಿಸಿ.

Q. No. 7. (b) The Central Government notified an export promotion scheme declaring that the exporters of cotton textiles and goods would be entitled to import raw materials equal to 100% of the value of exports. Relying upon the notification, A a trader exported goods of the value of Rs. 2 crores. He then sought a licence to import raw material worth Rs. 2 crores. The Central Government refused to issue the licence. A challenges the denial in court. Decide. Marks : 6

ಹತ್ತಿ ಬಟ್ಟೆ ಮತ್ತು ಸರಕುಗಳನ್ನು ನಿರ್ಯಾತ ಮಾಡಿದವರಿಗೆ ನಿರ್ಯಾತದ ಬೆಲೆಯ 100% ಬೆಲೆಯ ಕಚ್ಚಾ ಸರಕನ್ನು ಆಮದು ಮಾಡಿಕೊಳ್ಳಲು ಅವಕಾಶ ನೀಡಲಾಗುವುದೆಂದು ಕೇಂದ್ರ ಸರಕಾರ ನಿರ್ಯಾತ ಅಭಿವೃದ್ಧಿ ಯೋಜನೆಯನ್ನು ಘೋಷಿಸಿತು. ಇದನ್ನು ಆಧಾರವಾಗಿಟ್ಟುಕೊಂಡು 'ಅ' ಎಂಬ ವ್ಯಾಪಾರಿ 2 ಕೋಟಿ ರೂಪಾಯಿ ಬೆಲೆಯ ಹತ್ತಿ ಬಟ್ಟೆ ಹಾಗೂ ಸರಕನ್ನು ನಿರ್ಯಾತ ಮಾಡಿದನು. ತನಗೆ 2 ಕೋಟಿ ರೂಪಾಯಿಯ ಕಚ್ಚಾ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಅವಕಾಶ ಬೇಕೆಂದು ಪರವಾನಿಗೆ ಕೋರಿದನು. ಕೇಂದ್ರ ಸರಕಾರ ಪರವಾನಿಗೆ ಕೊಡಲಿಲ್ಲ. 'ಅ'ನು ಈ ನಿರ್ಧಾರವನ್ನು ಪ್ರಶ್ನಿಸುತ್ತಾನೆ. ನಿರ್ಧರಿಸಿ.

Q. No. 8. (a) Highlight the essential aspects of the contractual liability of the Government. Mention the important cases in this regard. Marks : 10

ಸರಕಾರದ ಕರಾರುಗಳಿಗೆ ಸಂಬಂಧಿಸಿದ ಬಾಧ್ಯತೆಗಳನ್ನು ಉಲ್ಲೇಖಿಸಿ. ಈ ವಿಷಯಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಹೆಸರಿಸಿ.

Q. No. 8. (b) Write a note on Doctrine of proportionality. Marks : 6

ಪ್ರಮಾಣಾನುಗುಣತೆ ಸಿದ್ಧಾಂತದ ಬಗ್ಗೆ ಟಿಪ್ಪಣಿ ಬರೆಯಿರಿ.

Q. No. 9. (a) Explain the principles relating to judicial control over public undertakings. Marks : 10

ಸಾರ್ವಜನಿಕ ಉದ್ದಿಮೆಗಳ ಮೇಲಿನ ನ್ಯಾಯಿಕ ಹತೋಟಿಗೆ ಸಂಬಂಧಿಸಿದ ನಿಯಮಗಳನ್ನು ವಿವರಿಸಿ.

Q. No. 9. (b) Write a note on “mal-administration”. Marks : 6

ದುರಾಡಳಿತದ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

Q. No. 10. (a) Does India need the office of an Ombudsman ? Elaborate. Marks : 10

ಭಾರತಕ್ಕೆ ಆಂಬುಡ್ಸ್‌ಮನ್ ಸಂಸ್ಥೆಯ ಅವಶ್ಯಕತೆ ಇದೆಯೇ ? ವಿವರಿಸಿ.

Q. No. 10. (b) Examine the scope of the Commission of Inquiry Act, 1952. Marks : 6

ವಿಚಾರಣಾ ಆಯೋಗ ಅಧಿನಿಯಮ, 1952 ಇದರ ವ್ಯಾಪ್ತಿಯನ್ನು ಪರೀಕ್ಷಿಸಿ.

---

## III Semester 3 Year LL.B. Examination, April/May 2022 (Dec. 2021)
## ADMINISTRATIVE LAW

Duration : 3 Hours Max. Marks : 80

**Instructions :** 1. **Answer all five Units.**
2. **One essay type question and one short note/ problem is compulsory from each Unit.**
3. **Figures to the right indicate marks.**
4. **Answers should be written completely either in English or Kannada completely.**

UNIT – 1

Q. No. 1. (a) "Administrative law has been the result of the outstanding growth of 20th century". Examine with definitions of administrative law. Marks : 10

"20 ನೇ ಶತಮಾನದ ಮಹತ್ತರ ಬೆಳವಣಿಗೆಯ ಪರಿಣಾಮವೇ ಆಡಳಿತದ ಕಾನೂನು" . ಆಡಳಿತದ ಕಾನೂನಿನ ವ್ಯಾಖ್ಯಾನಗಳೊಂದಿಗೆ ಪರಿಶೀಲಿಸಿ.

OR/ಅಥವಾ

Q. No. 1. (a) Discuss the relevance of the doctrine of rule of law and separation of powers in the modern progressive administration. Marks : 10

ಆಧುನಿಕ ಪ್ರಗತಿಪರ ಆಡಳಿತದಲ್ಲಿ ಕಾನೂನಿನ ಆಡಳಿತ ಮತ್ತು ಅಧಿಕಾರ ವಿಂಗಡನಾ ಸಿದ್ಧಾಂತಗಳ ಪ್ರಸ್ತುತತೆಯನ್ನು ಚರ್ಚಿಸಿ.

Q. No. 1. (b) Distinguish between Constitutional law and administrative law. Marks : 6

ಸಂವಿಧಾನ ಕಾನೂನು ಮತ್ತು ಆಡಳಿತ ಕಾನೂನಿನ ನಡುವಿನ ವ್ಯತ್ಯಾಸ ತಿಳಿಸಿರಿ.

OR/ಅಥವಾ

Q. No. 1. (b) Write notes on judicial and quasi-judicial functions. Marks : 6

ನ್ಯಾಯಿಕ ಮತ್ತು ಅರೆ-ನ್ಯಾಯಿಕ ಕಾರ್ಯಗಳ ಬಗ್ಗೆ ಟಿಪ್ಪಣಿ ಬರೆಯಿರಿ.

P.T.O.

## UNIT – 2

Q. No. 2. (a) Critically examine the constitutionality of delegated legislation in India with reference to decided cases. Marks : 10

ಭಾರತದಲ್ಲಿ ಪ್ರತ್ಯಾಯೋಜಿತ ಕಾನೂನಿನ ಸಂವಿಧಾನಾತ್ಮಕತೆಯನ್ನು ನಿರ್ಧಾರಿತ ಪ್ರಕರಣಗಳೊಂದಿಗೆ ಟೀಕಾತ್ಮಕವಾಗಿ ಪರಿಶೀಲಿಸಿರಿ.

OR/ಅಥವಾ

Q. No. 2. (a) "The delegated legislation may be assailed as ultra vires". Explain the statement in the light of judicial control over delegated legislation. Marks : 10

"ಪ್ರತ್ಯಾಯೋಜಿತ ಶಾಸನವನ್ನು ಮಿತಿ ಮೀರಿದೆ ಎಂಬ ಕಾರಣದಲ್ಲಿ ಅತಿಕ್ರಮಿಸಬಹುದು'. ಈ ಹೇಳಿಕೆಯನ್ನು ಪ್ರತ್ಯಾಯೋಜಿತ ಶಾಸನದ ಮೇಲಿನ ನ್ಯಾಯಿಕ ನಿಯಂತ್ರಣದ ಮೂಲಕ ವಿವರಿಸಿ.

Q. No. 2. (b) The municipal corporation of a district passed an order for closing of all business establishments by 7 PM everyday within its limits. A challenged the order. Decide. Marks : 6

ಒಂದು ಜಿಲ್ಲೆಯ ಪೌರ ಸಂಸ್ಥೆಯು ತನ್ನ ಪರಿಧಿಯಲ್ಲಿರುವ ಎಲ್ಲಾ ವಾಣಿಜ್ಯ ಮಳಿಗೆಗಳನ್ನು ಪ್ರತಿದಿನ ಸಾಯಂಕಾಲ 7 ಘಂಟೆಗೆ ಮುಚ್ಚಬೇಕು ಎಂಬುದಾಗಿ ಒಂದು ಆದೇಶ ಹೊರಡಿಸಿತು. ಈ ಆದೇಶವನ್ನು 'ಅ' ಎಂಬುವರು ಪ್ರಶ್ನಿಸುತ್ತಾರೆ. ನಿರ್ಧರಿಸಿ.

OR/ಅಥವಾ

Q. No. 2. (b) The rules framed under the Parent Act were required to be published in the Official Gazette as well as in Kannada newspaper having wide circulation. The rules were issued in Official Gazette but were not published as per the Parent Act. Decide the validity of the rules. Marks : 6

ಮೂಲ ಕಾನೂನಿನಡಿಯಲ್ಲಿ ರಚಿಸಿದ ನಿಯಮಗಳನ್ನು ಅಧಿಕೃತವಾಗಿ ಗಜೆಟ್‌ನಲ್ಲಿ ಮತ್ತು ಹೆಚ್ಚಿನ ಪ್ರಚಲಿತತೆ ಇರುವ ಕನ್ನಡ ದಿನ ಪತ್ರಿಕೆಯಲ್ಲಿ ಪ್ರಕಟಿಸಬೇಕು ಎಂಬ ಅಗತ್ಯವಿತ್ತು. ಆದರೆ ನಿಯಮಗಳನ್ನು ಗಜೆಟ್ ಪ್ರಕಟನೆ ಮಾತ್ರ ಹೊರಡಿಸಿ ಕನ್ನಡ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುವುದಿಲ್ಲ. ಈ ನಿಯಮಗಳ ವಿಧಿ ಬದ್ಧತೆಯನ್ನು ನಿರ್ಧರಿಸಿ.

## UNIT – 3

Q. No. 3. (a) What is administrative adjudication ? Explain the problems in administrative adjudication. Marks : 10

ಆಡಳಿತಾತ್ಮಕ ನ್ಯಾಯದಾನ (ತೀರ್ಪು) ಎಂದರೇನು? ಆಡಳಿತಾತ್ಮಕ ನ್ಯಾಯದಾನ ವ್ಯವಸ್ಥೆಯಲ್ಲಿನ ಸಮಸ್ಯೆಗಳನ್ನು ವಿವರಿಸಿ.

OR/ಅಥವಾ

Q. No. 3. (a) Discuss the rule against bias with reference to decided cases. Marks : 10

'ಪಕ್ಷಪಾತದ ವಿರುದ್ಧ ನಿಯಮ'ವನ್ನು ನಿರ್ಧರಿತ ಪ್ರಕರಣಗಳೊಂದಿಗೆ ಚರ್ಚಿಸಿ.

Q. No. 3. (b) Petitioner was appointed as revenue collector by the Municipality. Later the appointment was set aside by the commissioner. The petitioner challenged the action. Decide. Marks : 6

ಅರ್ಜಿದಾರರನ್ನು ಕಂದಾಯ ಅಧಿಕಾರಿಯನ್ನಾಗಿ ಪುರಸಭೆಯು ನೇಮಕ ಮಾಡಿತು. ತದ ನಂತರ ಈ ನೇಮಕಾತಿಯನ್ನು ಪುರಸಭೆ ಆಯುಕ್ತರು ರದ್ದು ಪಡಿಸುತ್ತಾರೆ. ಅರ್ಜಿದಾರನು ಈ ಕ್ರಮವನ್ನು ಪ್ರಶ್ನಿಸುತ್ತಾನೆ. ತೀರ್ಮಾನಿಸಿರಿ.

OR/ಅಥವಾ

Q. No. 3. (b) Business premises of the appellant Shankar were searched and in view of some suspicion 420 watches were confiscated. Shankar challenged the action. Decide. Marks : 6

ಮೇಲ್ಮನವಿದಾರ ಶಂಕರ್ ಎಂಬವರ ವಾಣಿಜ್ಯ ಮಳಿಗೆಗೆ ದಾಳಿ ಮಾಡಲಾಗಿ ಅಲ್ಲಿ ಪರೀಕ್ಷಿಸಲಾಗಿ ಅನುಮಾನ ಕಂಡು ಬಂದದ್ದರಿಂದ 420 ಕೈ ಗಡಿಯಾರಗಳನ್ನು ಮುಟ್ಟುಗೋಲು ಹಾಕಲಾಯಿತು. ಶಂಕರ್ ಅವರು ಈ ಕ್ರಮವನ್ನು ಪ್ರಶ್ನಿಸುತ್ತಾರೆ. ನಿರ್ಧರಿಸಿ.

## UNIT – 4

Q. No. 4. (a) Explain the grounds of judicial review over administrative discretion with cases. Marks : 10

ಆಡಳಿತಾತ್ಮಕ ವಿವೇಚನೆಯ ಮೇಲಿನ ನ್ಯಾಯಿಕ ಪರಿಶೀಲನೆಯ ವಿವಿಧ ಆಧಾರಗಳನ್ನು ಪ್ರಕರಣಗಳೊಂದಿಗೆ ವಿವರಿಸಿ.

OR/ಅಥವಾ

Q. No. 4. (a) Discuss the conditions for the liability of administration in contracts. Marks : 10

ಕರಾರುಗಳಲ್ಲಿ ಆಡಳಿತದ ಬಾಧ್ಯತೆಯ ಷರತ್ತುಗಳನ್ನು ಚರ್ಚಿಸಿರಿ.

Q. No. 4. (b) The Government had issued a sanction to the respondents to open a new unaided school and to upgrade the existing ones. However after 15 days a direction was issued to revoke the sanction. This direction was challenged. Decide the validity referring to appropriate principle. Marks : 6

ಸರಕಾರವು ಪ್ರತಿವಾದಿಗಳಿಗೆ ಒಂದು ಅನುದಾನ ರಹಿತ ಶಾಲೆ ಸ್ಥಾಪಿಸುವ ಮತ್ತು ಈಗಾಗಲೇ ಅಸ್ತಿತ್ವದಲ್ಲಿರುವ ಶಾಲೆಗಳನ್ನು ಮೇಲ್ದರ್ಜೆಗೇರಿಸುವ ಸಲುವಾಗಿ ಒಂದು ಆದೇಶ ಹೊರಡಿಸಿ ಅನುಮತಿ ನೀಡಿತು. ಆದರೆ 15 ದಿನಗಳ ತರುವಾಯ ಒಂದು ನಿರ್ದೇಶನ ಹೊರಡಿಸಿ ಈ ಅನುಮತಿಯನ್ನು ರದ್ದುಪಡಿಸಿತು. ಈ ನಿರ್ದೇಶನವನ್ನು ಪ್ರತಿವಾದಿಗಳು ಪ್ರಶ್ನಿಸುತ್ತಾರೆ. ಸೂಕ್ತವಾದ ನಿಯಮವನ್ನು ಉಲ್ಲೇಖಿಸಿ ಈ ನಿರ್ದೇಶನದ ವಿಧಿ ಬದ್ಧತೆಯನ್ನು ನಿರ್ಧರಿಸಿ.

OR/ಅಥವಾ

Q. No. 4. (b) Bombay municipality framed a town planning scheme and submitted to the state government for approval. The same was approved by the government. But the municipality failed to act on the approved scheme. Whether municipality can be compelled to implement the scheme. Decide. Marks : 6

ಬಾಂಬೆ ಮುನಿಸಿಪಾಲಿಟಿಯು ಒಂದು ನಗರಾಭಿವೃದ್ಧಿ ಯೋಜನೆಯನ್ನು ತಯಾರಿಸಿ ಅಗತ್ಯವಾದ ಅನುಮತಿಗಾಗಿ ಸರ್ಕಾರಕ್ಕೆ ಸಲ್ಲಿಸಿತು. ಈ ಯೋಜನೆಯನ್ನು ಸರಕಾರವು ಜಾರಿಗೊಳಿಸಲು ಯೋಗ್ಯ ಎಂಬುದಾಗಿ ಅನುಮೋದನೆ ನೀಡಿತು. ಆದರೆ ಬಾಂಬೆ ಮುನಿಸಿಪಾಲಿಟಿಯು ಈ ಯೋಜನೆಯನ್ನು ಜಾರಿಗೊಳಿಸುವಲ್ಲಿ ವಿಫಲವಾಗಿತ್ತು. ಈ ಯೋಜನೆಯನ್ನು ಜಾರಿಗೊಳಿಸುವಂತೆ ಒತ್ತಾಯಿಸಬಹುದಾ ? ನಿರ್ಧರಿಸಿ.

## UNIT – 5

Q. No. 5. (a) Explain the extent of parliamentary and public control over public corporations. Marks : 10

ಸಾರ್ವಜನಿಕ ಸಂಸ್ಥೆಗಳ ಮೇಲಿನ ಸಂಸದೀಯ ಮತ್ತು ಸಾರ್ವಜನಿಕ ನಿಯಂತ್ರಣದ ವ್ಯಾಪ್ತಿಯನ್ನು ವಿವರಿಸಿರಿ.

OR/ಅಥವಾ

Q. No. 5. (a) Explain the power, functions of Karnataka Lokayukta and its impact on public administration. Marks : 10

ಕರ್ನಾಟಕದ ಲೋಕಾಯುಕ್ತರ ಅಧಿಕಾರ, ಕಾರ್ಯಗಳು ಮತ್ತು ಸಾರ್ವಜನಿಕ ಆಡಳಿತದಲ್ಲಿ ಅದರ ಪ್ರಭಾವವನ್ನು ವಿವರಿಸಿ.

Q. No. 5. (b) Write a note on classification of public corporations. Marks : 6

ಸಾರ್ವಜನಿಕ ನಿಗಮಗಳ ವರ್ಗೀಕರಣದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 5. (b) Write a note on central vigilance commission. Marks : 6

ಕೇಂದ್ರೀಯ ಜಾಗೃತ ಆಯೋಗದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

**III Semester 3 Year LL.B./V Semester 5 Year B.A.LL.B. (Maj.-Min)/ B.B.A.LL.B./B.Com.LL.B. Examination, March/April 2021**

**ADMINISTRATIVE LAW**

Duration : 3 Hours Max. Marks : 80

**Instructions : 1. Answer any five Questions from group (a) each question carries 10 marks.**

**2. Answer any five Questions from group (b) each question carries 06 marks.**

**3. Answers should be written either in English or Kannada completely.**

Q. No. 1. (a) Discuss the various definitions of administrative law. State its nature and scope. Marks : 10

ಆಡಳಿತಾತ್ಮಕ ಕಾನೂನಿನ ವಿವಿಧ ವ್ಯಾಖ್ಯಾನಗಳನ್ನು ಚರ್ಚಿಸಿ. ಅದರ ಸ್ವಭಾವ ಮತ್ತು ವ್ಯಾಪ್ತಿಯನ್ನು ತಿಳಿಸಿ.

Q. No. 1. (b) Write a note on Droit administratiff. Marks : 6

ಡ್ರಾಯಿಟ್ ಅಡ್ಮಿನಿಸ್ಟ್ರೇಟಿಫ್ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

Q. No. 2. (a) 'The dividing line between judicial and quasi-judicial function is very thin and gradually been obliterated.' Explain this observation in the light of classification of administrative action. Marks : 10

'ನ್ಯಾಯಿಕ ಮತ್ತು ಅರೆ-ನ್ಯಾಯಿಕ ಕಾರ್ಯಗಳ ನಡುವಿನ ವಿಭಾಗಿಸುವ ರೇಖೆಯು ಬಹಳ ತೆಳುವಾಗಿದೆ ಮತ್ತು ಕ್ರಮೇಣ ಅಳಿಸಿ ಹೋಗುತ್ತಿದೆ.' ಈ ಅವಲೋಕನವನ್ನು ಆಡಳಿತಾತ್ಮಕ ಕ್ರಮಗಳ ವರ್ಗೀಕರಣವನ್ನು ಉಲ್ಲೇಖಿಸಿ ವಿವರಿಸಿ.

Q. No. 2. (b) Doctrine of separation of powers in Indian Constitution. Marks : 6

ಭಾರತದ ಸಂವಿಧಾನದಲ್ಲಿ ಅಧಿಕಾರ ವಿಂಗಡನಾ ಸಿದ್ಧಾಂತ.

Q. No. 3. (a) Define deligated legislation and explain the reasons for the emergence of delegated legislation in India. Marks : 10

ಪ್ರತ್ಯಾಯೋಜಿತ ಶಾಸನವನ್ನು ವ್ಯಾಖ್ಯಾನಿಸಿ ಮತ್ತು ಭಾರತದಲ್ಲಿ ಪ್ರತ್ಯಾಯೋಜಿತ ಶಾಸನದ ಹೊರಹೊಮ್ಮುವಿಕೆಗೆ ಇರುವ ಕಾರಣಗಳನ್ನು ವಿವರಿಸಿ.

Q. No. 3. (b) The Parent Act empowered the municipality to impose sales tax at the rate of 25/- per bottle of foreign liquor. But the municipality failed to exercise the power. The state government imposed the tax itself for the municipality. The action of the government was challenged. Decide. Marks : 6

ಒಂದು ಮೂಲ ಕಾನೂನು ಮುನ್ಸಿಪಾಲಿಟಿಗೆ ಅಧಿಕಾರ ನೀಡಿ ಒಂದೊಂದು ಬಾಟಲ್ ವಿದೇಶೀ ಮದ್ಯಕ್ಕೆ ತಲಾ ರೂ. 25/- ರಂತೆ ಮಾರಾಟ ತೆರಿಗೆ ವಿಧಿಸುವಂತೆ ಅನುವು ಮಾಡಿತ್ತು. ಆದರೆ ಈ ಅಧಿಕಾರವನ್ನು ಪ್ರಯೋಗಿಸಲು ಮುನಿಸಿಪಾಲಿಟಿಯು ವಿಫಲವಾಯಿತು. ರಾಜ್ಯ ಸರಕಾರವು ಮುನಿಸಿಪಾಲಿಟಿಗಾಗಿ ಈ ದರವನ್ನು ತಾನೇ ನಿಗದಿಪಡಿಸಿತು. ಸರಕಾರದ ಈ ಕ್ರಮವನ್ನು ಪ್ರಶ್ನಿಸಲಾಯಿತು. ನಿರ್ಧರಿಸಿ.

Q. No. 4. (a) Discuss the scope of Parent Act's control over deligated legislation with decided cases. Marks : 10

ಪ್ರತ್ಯಾಯೋಜಿತ ಶಾಸನದ ಮೇಲಿನ ಮೂಲ ಕಾನೂನಿನ (ಸಂಸದೀಯ) ನಿಯಂತ್ರಣವನ್ನು ನಿರ್ಧರಿತ ಪ್ರಕರಣಗಳೊಂದಿಗೆ ಚರ್ಚಿಸಿ.

Q. No. 4. (b) The Kerala Education code provided that teachers working in the educational institutions would super annuate on attaining 60 years of age. There after Kerala Education Act and Rules were enacted prescribing 58 years of age for superannuation. The pititioner appointed under Kerala Education Code was retired at the age of 58 years by the management and hence challenged the action. Decide. Marks : 6

ಕೇರಳದ ವಿದ್ಯಾಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರು ತಮ್ಮ 60ನೇ ವಯಸ್ಸು ಪೂರ್ತಿಗೊಂಡ ಕೂಡಲೇ ವೃತ್ತಿಯಿಂದ ನಿವೃತ್ತಿ ಹೊಂದುವರು ಎಂಬುದಾಗಿ ಕೇರಳ ಶಿಕ್ಷಣ ಸಂಹಿತೆಯು ತಿಳಿಸಿರುತ್ತದೆ. ತದನಂತರ ಕೇರಳ ಶಿಕ್ಷಣ ಕಾಯ್ದೆ ಮತ್ತು ನಿಯಮಗಳನ್ನು ಜಾರಿ ಮಾಡಿ ನಿವೃತ್ತಿ ವಯಸ್ಸನ್ನು 58 ವರ್ಷ ಎಂದು ನಿಗದಿ ಮಾಡಲಾಯಿತು. ಅರ್ಜಿದಾರ ಅಧ್ಯಾಪಕರು ಕೇರಳ ಶಿಕ್ಷಣ ಸಂಹಿತೆಯಡಿಯಲ್ಲಿ ನೇಮಕಗೊಂಡಿದ್ದರೂ ಕೇರಳ ಶಿಕ್ಷಣ ಕಾಯ್ದೆಯ ಅನುಸಾರ ಅವರನ್ನು ಆಡಳಿತ ಮಂಡಳಿಯು 58 ವರ್ಷ ವಯಸ್ಸು ಪೂರ್ತಿಗೊಂಡೊಡನೆ ನಿವೃತ್ತಿ ಮಾಡಿತು. ಈ ಕ್ರಮವನ್ನು ಪ್ರಶ್ನಿಸುತ್ತಾರೆ. ನಿರ್ಧರಿಸಿ.

Q. No. 5. (a) Discuss the concept of "Fair Hearing" with the help of decided cases. Refer to stages of fair hearing. Marks : 10

''ನ್ಯಾಯ ಸಮ್ಮತ ಸುನಾವಣೆ'' ಎಂಬ ಪರಿಕಲ್ಪನೆಯನ್ನು ತೀರ್ಮಾನಿಸಿದ ಪ್ರಕರಣಗಳೊಂದಿಗೆ ಚರ್ಚಿಸಿರಿ. ನ್ಯಾಯ ಸಮ್ಮತ ಸುನಾವಣೆಯ ವಿವಿಧ ಹಂತಗಳನ್ನು ಉಲ್ಲೇಖಿಸಿ.

Q. No. 5. (b) According to the provisions of the Act, the Commercial Tax Officer Made an opinion that pititioner was not liable to pay the tax. Still the officer referred the matter to his superior. On his instructions, the commercial tax officer imposed tax on the pititioner. The petitioner challenged the same. Decide. Marks : 6

ಕಾಯ್ದೆಯ ಉಪಬಂಧಗಳಿಗೆ ಅನುಸಾರವಾಗಿ ವಾಣಿಜ್ಯ ತೆರಿಗೆ ಅಧಿಕಾರಿಯು ತಮ್ಮ ಅಭಿಪ್ರಾಯದಂತೆ ಅರ್ಜಿದಾರರು ತೆರಿಗೆ ಪಾವತಿಯ ಬಾಧ್ಯತೆ ಹೊಂದಿರುವುದಿಲ್ಲ ಎಂಬುದಾಗಿತ್ತು. ಆದರೂ ತಮ್ಮ ಮೇಲಾಧಿಕಾರಿಗೆ ಈ ವಿಷಯವನ್ನು ಮಂಡಿಸಿದರು. ಈ ಮೇಲಾಧಿಕಾರಿಯ ಸೂಚನೆ ಮೇರೆಗೆ ವಾಣಿಜ್ಯ ತೆರಿಗೆ ಅಧಿಕಾರಿಯು ತೆರಿಗೆ ವಿಧಿಸಿದರು. ಈ ಕ್ರಮವನ್ನು ಅರ್ಜಿದಾರರು ಪ್ರಶ್ನಿಸುತ್ತಾರೆ. ನಿರ್ಧರಿಸಿ.

Q. No. 6. (a) Explain with the help of decided cases the various kinds of bias and its impact on fair decision. Marks : 10

ನಿರ್ಧರಿತ ಪ್ರಕರಣಗಳೊಂದಿಗೆ ಪಕ್ಷಪಾತದ ವಿವಿಧ ಪ್ರಕಾರಗಳು ಮತ್ತು ನ್ಯಾಯ ಸಮ್ಮತ ತೀರ್ಪಿನಲ್ಲಿ ಅದರ ಪರಿಣಾಮಗಳನ್ನು ವಿವರಿಸಿ.

Q. No. 6. (b) A lecturer had been granted leave for doing M.Phil. and in violation of leave condition, had joined Ph.D. course. She was given notice and after considering her reply where is she admitted to joining Ph.D. course, she was terminated from the service. She challenged the action as violation of Principle of natural justice. Marks : 6

ಒಂದು ಉಪನ್ಯಾಸಕರಿಗೆ M.Phil. ವ್ಯಾಸಂಗ ಮಾಡುವುದಕ್ಕಾಗಿ ರಜೆ ನೀಡಲಾಗಿತ್ತು ಮತ್ತು ಈ ರಜಾ ನಿಬಂಧನೆಯನ್ನು ಉಲ್ಲಂಘಿಸಿ ಅವರು Ph.D. ಕೋರ್ಸಿಗೆ ಪ್ರವೇಶ ಪಡೆದರು. ಇದರಿಂದಾಗಿ ಉಪನ್ಯಾಸಕಿಗೆ ಒಂದು ನೋಟೀಸ್ ನೀಡಲಾಗಿತ್ತು ಮತ್ತು ಈ ನೋಟೀಸ್‌ಗೆ ಅವರು ನೀಡಿದ ಉತ್ತರವನ್ನು ಆಧರಿಸಿ ಅವರು ಮಾಡಿದ ಉಲ್ಲಂಘನೆಯನ್ನು ಒಪ್ಪಿರುವುದರಿಂದ ಅವರನ್ನು ಸೇವೆಯಿಂದ ವಜಾ ಮಾಡಲಾಯಿತು. ಈ ಕ್ರಮವನ್ನು ನೈಸರ್ಗಿಕ ಸಿದ್ಧಾಂತದ ಉಲ್ಲಂಘನೆ ಎಂದು ಪ್ರಶ್ನಿಸುತ್ತಾರೆ. ನಿರ್ಧರಿಸಿ.

Q. No. 7. (a) Explain the conditions and grounds for the issue of Mandamous writ with the help of decided cases. Marks : 10

ಮ್ಯಾಂಡಮಸ್ ರಿಟ್‌ನ್ನು ಹೊರಡಿಸಲು ಇರುವ ಷರತ್ತುಗಳನ್ನು ಮತ್ತು ಕಾರಣಗಳನ್ನು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿ.

Q. No. 7. (b) Write a note on grounds of judicial review on administrative discretion. Marks : 6

ಆಡಳಿತಾತ್ಮಕ ವಿವೇಚನೆಯ ಮೇಲಿನ ನ್ಯಾಯಿಕ ಪರಿಶೀಲನೆಯ ವಿವಿಧ ಕಾರಣಗಳ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.